3.	ಸಹಾಯಕ ಗ್ರಂಥಪಾಲಕರು	1	ಭರ್ತಿ ಮಾಡಿದೆ
4.	ಗ್ರಂಥಾಲಯ ಸಹಾಯಕರು	7	ಭರ್ತಿ ಮಾಡಿದೆ
5.	ಗ್ರಂಥಾಲಯ ಸಹವರ್ತಿಗಳು	5	ಭರ್ತಿ ಮಾಡಿದೆ

ಖಾಲಿ ಇರುವ ಮುಖ್ಯ ಗ್ರಂಥಾಲಯಾಧಿಕಾರಿಗಳ ಹುದ್ದೆಯನ್ನು ಶೀಘ್ರವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಸರ್ಕಾರದ ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದು ಪ್ರಸ್ತುತ ಹೊಸ ಹುದ್ದೆಗಳನ್ನು ಸೃಜಿಸಲಾಗುತ್ತಿಲ್ಲ. ಸರ್ಕಾರದ ಆರ್ಥಿಕ ಮಿತವ್ಯಯ ಸಡಿಲಿಸಿದಲ್ಲಿ ನಿಯಮಾನುಸಾರ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಬಗ್ಗೆ ಯಾವುದೇ ಸೂಚನೆಗಳು ಸ್ವೀಕೃತವಾಗಿರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿಯವರ ಸಡಕ್ ಯೋಜನೆ ಅನುಷ್ಠಾನ.

147(444)

ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪ್ರಧಾನ ಮಂತ್ರಿಗಳ 'ಸಡಕ್' ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ಅಭಿವೃದ್ಧಿಗೊಳಿಸಲು ಕಾರ್ಯಕ್ರಮ ರೂಪಿಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?

2) ಹಾಗಿದ್ದಲ್ಲಿ ಇದರ ವಿವರಗಳೇನು?

3) ಈ ಯೋಜನೆ ಯಾವ ಹಂತದಲ್ಲಿದೆ?

Sri M.Y.GHORPADE (Minister for Rural Development and Panchayat Raj):

1) ಹೌದು, ಯೋಜನೆ ರೂಪಿಸಿ ಕೇಂದ್ರ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಲು ಕಳುಹಿಸಲಾಗಿದೆ.

2) ಒಟ್ಟು ರೂ.96.99 ಕೋಟಿಗಳಿಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಆ ಪೈಕಿ ರೂ.20.19 ಕೋಟಿ ಹಣ ಬಿಡುಗಡೆ ಆದೇಶ ಬಂದಿದೆ. ರಾಜ್ಯ ಸರ್ಕಾರದಲ್ಲಿ ಇನ್ನೂ ಜಮೆ ಆಗಿರುವುದಿಲ್ಲ.

3) ಅತೀ ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲು ಆದೇಶ ನೀಡಲಾಗುವುದು.

ಜಯದೇವ ಹೃದ್ರೋಗ ಸಂಸ್ಥೆಗೆ ನೂತನ ಕಟ್ಟಡ ಮತ್ತು ಹೆಚ್ಚುವರಿ ವೈದ್ಯಕೀಯ ಸೌಲಭ್ಯ.

148(445)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಆರೋಗ್ಯ ಮತ್ತು ಕುಟುಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಗೆ ನೂತನವಾದ ವಿಶಾಲವಾದ ಕಟ್ಟಡದ ಸೌಲಭ್ಯ ದೊರಕಿಸಲು ಹಾಗೂ ರೋಗಿಗಳಿಗೆ ಹೆಚ್ಚುವರಿ ವೈದ್ಯಕೀಯ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು?

ಇ) ಕಟ್ಟಡದ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ?

ಈ) ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಮಾಹೆಯಾನ ಎಷ್ಟು ತೆರೆದ ಹೃದಯದ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಈ ಹೊಸ ಕಟ್ಟಡದಲ್ಲಿ 519 ಹಾಸಿಗೆಗಳನ್ನೊಳಗೊಂಡಿದೆ. ಇದು ಆರು ಮುಖ್ಯ ಶಸ್ತ್ರ ಚಿಕಿತ್ಸಾ ಕೊಠಡಿ ಮತ್ತು ಒಂದು ಮೈನರ್ ಶಸ್ತ್ರ ಚಿಕಿತ್ಸಾ ಕೊಠಡಿ ಹಾಗೂ ನಾಲ್ಕು ಹೃದಯ ನಳಿಕೆ (ಕ್ಯಾತಲ್ಯಾಬ್) ವಿಭಾಗಗಳಿವೆ. ತುರ್ತು ಹೊರ ರೋಗಿ ವಿಭಾಗವನ್ನು ಸಹ ಒದಗಿಸಲಾಗಿದೆ. ಹೊರ ರೋಗಿ ಹಾಗೂ ಒಳ ರೋಗಿಗಳಿಗೆ ಸೌಲಭ್ಯ ಒದಗಿಸಲು ನಾಲ್ಕು ಪ್ರತಿಧ್ವನಿ ರೇಖಾ ಚಿತ್ರ ಪ್ರಯೋಗಾಲಯ ಆರು ಟ್ರೆಡ್‌ಮಿಲ್ ಪರೀಕ್ಷಾ ಲ್ಯಾಬ್,